**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ.ನಂ.543/2019**

**ದಿನಾಂಕಃ21-10-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ1 ಸಿ.ಡಬ್ಲ್ಯುಃ1

ಸಾಕ್ಷಿಯ ಹೆಸರು ಃ ಯಶಸ್ವಿನಿ
ಗಂಡನ ಹೆಸರು ಃ ಪುನೀತ್ ಕುಮಾರ್
ವಯಸ್ಸು ಃ 29 ವರ್ಷ
ಉದ್ಯೋಗ ಃ ಗೃಹಿಣಿ
ವಾಸ ಃ ಬೀರೂರು

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ**

ಚಾಸಾ-7,8 ಮತ್ತು 9 ನನ್ನ ತಂದೆ ತಾಯಿ ಮತ್ತು ಸಹೋದರ ಆಗಿರುತ್ತಾರೆ. ಚಾಸಾ-14 ಮತ್ತು 15 ನನ್ನ ತಂದೆಯ ಸ್ನೇಹಿತರು. 1 ನೇ ಆರೋಪಿ ನನ್ನ ಗಂಡ 2 ಮತ್ತು 3 ನೇ ಆರೋಪಿತರು ನನ್ನ ಅತ್ತೆ ಮತ್ತು ಮಾವ. ನಾನು ಬಿ.ಇ ಪದವೀಧರೆ. ನಾನು ಮತ್ತು ನನ್ನ ತಮ್ಮ ನನ್ನ ತಂದೆ ತಾಯಿಗೆ ಇಬ್ಬರೇ ಮಕ್ಕಳು. ದಿಃ08-12-2016 ರಂದು ನಾನು 1 ನೇ ಆರೋಪಿಯೊಂದಿಗೆ ಕುಟುಂಬದ ಹಿರಿಯರ ನಿಶ್ಚಯದಂತೆ ಮದುವೆಯಾಗಿರುತ್ತದೆ. 1 ನೇ ಆರೋಪಿಯು ಮದುವೆಯ ಸಮಯದಲ್ಲಿ ಕಾವೇರಿ ನೀರಾವರಿ ನಿಗಮದಲ್ಲಿ ಕಿರಿಯ ಸಿವಿಲ್ ಇಂಜಿನಿಯರ್ ಗಿ ಕೆಲಸ ಮಾಡುತ್ತಿರುತ್ತಾರೆ. ಮದುವೆಯ ಸಮಯದಲ್ಲಿ 1 ನೇ ಆರೋಪಿಗೆ ಚಿನ್ನದ ಒಡವೆಗಳಾದ 48 ಗ್ರಾಂ. ಸರ, 32 ಗ್ರಾಂ. ನ ಬ್ರೇಸಲ್ಯೆಟ್, ಒಂದು ಚಿನ್ನದ ಉಂಗುರ ಮತ್ತು ಸುಮಾರು 1 ಕೆ.ಜಿ ತೂಕವುಳ್ಳ ಬೆಳ್ಳಿಯ ಪೂಜಾ ಸಾಮಾಗ್ರಿಗಳನ್ನು ನನ್ನ ಪೋಷಕರು ನೀಡಿರುತ್ತಾರೆ. ಆರೋಪಿಗಳ ಬೇಡಿಕೆಯಂತೆ ನನ್ನ ಮದುವೆಯು ಬೆಂಗಳೂರಿನ ರಾಜಾರಾಜೇಶ್ವರಿ ನಗರದ ಮೀನಾಕ್ಷಿ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಮದುವೆಯಾದ ನಂತರ ನಾನು ಬೆಂಗಳೂರಿನಲ್ಲಿರುವ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ಮದುವೆಯಾದ ನಂತರ ದಿಃ11-12-2016 ರವರೆಗೆ ಕೇವಲ ಮೂರು ದಿನಗಳು ಮಾತ್ರ ಉಳಿದುಕೊಂಡಿರುತ್ತೇನೆ. ನಂತರ ನನ್ನ ತಂದೆಯ ಮನೆಗೆ ದೇವತಾ ಕಾರ್ಯಕ್ಕೋಸ್ಕರ ದಿಃ12-12-2016 ರಂದು ನಾನು ಮತ್ತು ಆರೋಪಿಗಳು ಬಂದಿರುತ್ತೇವೆ. ಅದೇ ದಿನ ರಾತ್ರಿ 1 ನೇ ಆರೋಪಿಯು ನನ್ನ ಬಳಿ

ಬಂದು ನಿನ್ನ ತಂದೆ ಮದುವೆಯ ದಿನದಂದೇ 150 ಗ್ರಾಂ. ಚಿನ್ನದ ಆಭರಣಗಳನ್ನು ಕೊಡುವುದಾಗಿ ಹೇಳಿದ್ದರು ಆದರೆ ಕೊಟ್ಟಿಲ್ಲ ಈಗ ಕೊಡದಿದ್ದಲ್ಲಿ ನಾನು ನಿನ್ನನ್ನು ಇಲ್ಲಿಯೇ ಬಿಟ್ಟು ಹೋಗುತ್ತೇನೆಂದು ಹೇಳಿ ನನ್ನ ಮೇಲೆ ದೈಹಿಕ ಹಲ್ಲೆ ಮಾಡಿದ್ದರು. ನಂತರ ಮರುದಿನ ಆರೋಪಿಗಳು ನನ್ನನ್ನು ನನ್ನ ತಂದೆ ಮನೆಯಲ್ಲಿಯೇ ಬಿಟ್ಟು ಅವರು ಬೆಂಗಳೂರಿಗೆ ಹೊರಟು ಹೋದರು. ನಂತರ ನಾನು 10 ದಿನಗಳ ಕಾಲ ನನ್ನ ತಂದೆ ಮನೆಯಲ್ಲಿಯೇ ಉಳಿದುಕೊಂಡಿದ್ದೆನು. ಆ 10 ದಿನಗಳ ಸಮಯದಲ್ಲಿ ಆರೋಪಿತರು ನನಗೆ ಫೋನ್ ಮಾಡಿ ನಿನ್ನ ತಂದೆಯಿಂದ 150 ಗ್ರಾಂ. ಚಿನ್ನದ ಆಭಾರಣಗಳನ್ನು ಪಡೆದುಕೊಂಡು ತಮ್ಮ ಮನೆಗೆ ಬರುವಂತೆ ಮಾನಸಿಕವಾಗಿ ಹಿಂಸಿಸುತ್ತಿದ್ದರು. ಸದರಿ ವಿಷಯವನ್ನು ನಾನು ನನ್ನ ತಂದೆಗೆ ತಿಳಿಸಿರುತ್ತೇನೆ.

ನಂತರ ಸದರಿ ವಿಷಯವನ್ನು ನನ್ನ ತಂದೆಯವರು ಚಾಸಾ-14 ಮತ್ತು 15 ರವರಿಗೆ ತಿಳಿಸಲಾಗಿ ಅವರು ಮನೆಗೆ ಬಂದು ಮಾತನಾಡುವುದಾಗಿ ತಿಳಿಸಿದ್ದರು.ನಂತರ ಚಾಸಾ-14,15 ಮತ್ತು ನನ್ನ ತಂದೆ ಮಾತುಕತೆ ಮಾಡಲು ಅರೋಪಿಗಳ ಮನೆಗೆ ಬೆಂಗಳೂರಿಗೆ ಹೋಗಿದ್ದರು. ಆಗ ಆರೋಪಿಗಳು ನನ್ನ ತಂದೆ ಮತ್ತು ಚಾಸಾ-14 ಮತ್ತು 15 ರವರ ಮಾತಿಗೆ ಒಪ್ಪಿಕೊಂಡಿರುತ್ತಾರೆ. ದಿಃ22-12-2016 ರಂದು 1 ನೇ ಆರೋಪಿ ಬೀರೂರಿನ ನಮ್ಮ ಮನೆಗೆ ಬಂದು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ನನ್ನನ್ನು ಆರೋಪಿಗಳ ಮನೆಗೆ ಕರೆದುಕೊಂಡು ದಿನ ನನ್ನನ್ನೊಂದಿಗೆ ಯಾರು ಮಾತನಾಡುತ್ತಿರಲಿಲ್ಲ. ಮರು ದಿನ ನನ್ನ ಗಂಡ ಎಂದಿನಂತೆ ಕೆಲಸಕ್ಕೆ ಹೋಗಿರುತ್ತಾರೆ. ಆಗ ನಾನು ಮನೆಯಲ್ಲಿರುವ ಸಮಯದಲ್ಲಿ ನನ್ನ ಅತ್ತೆ 2 ನೇ ಆರೋಪಿ ನನ್ನನ್ನು ಕುರಿತು ಏನೆ ಬೇವರ್ಸಿ ನನ್ನ ಮಗೆ ಹೇಳಿದಂತೆ ಕಾರು ಮತ್ತು ಒಡವೆಗಳನ್ನು ತರದಿದ್ದರೆ ನನ್ನ ಮಗನಿಗೆ ಬೇರೆ ಮದುವೆ ಮಾಡುತ್ತೇವೆಂದು ಹೇಳಿ ಮಾನಸಿಕವಾಗಿ ಹಿಂಸಿಸುತ್ತಿದ್ದರು. ನನ್ನ ಮಾವ 3 ನೇ ಆರೋಪಿ ಸಹ ಕಾರು ಮತ್ತು ಒಡವೆಗಳನ್ನು ನನ್ನ ತಂದೆ ಮನೆಯಿಂದ ತರುವಂತೆ ಮಾನಸಿಕವಾಗಿ ಹಿಂಸಿಸುತ್ತಿದ್ದರು. ಈ ವಿಚಾರವನ್ನು ನಾನು ಪೋನಿನ ಮೂಲಕ ನನ್ನ ತಂದೆಗೆ ತಿಳಿಸಿರುತ್ತೇನೆ.ನಂತರ 2 ದಿನಗಳಾದ ಮೇಲೆ ನನ್ನ ತಂದೆ ಬೆಂಗಳೂರಿನ ನನ್ನ ಗಂಡನ ಮನೆಗೆ ಬಂದಿದ್ದರು. ಆಗ ಆರೋಪಿತರು ನನ್ನ

ತಂದೆಯನ್ನು ಕುರಿತು ಕಾರು ಮತ್ತು ಒಡವೆಗಳನ್ನು ಕೊಟ್ಟರೆ ನಿಮ್ಮ ಮಗಳನ್ನು ಇರಿಸಿಕೊಳ್ಳುತೇವೆ ಇಲ್ಲದಿದ್ದರೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಆಗ ನನ್ನ ತಂದೆ ಎಷ್ಟು ವಿನಂತಿಸಿಕೊಂಡರು ಆರೋಪಿಗಳು ಒಪ್ಪಲಿಲ್ಲ ಮತ್ತು ನನ್ನನ್ನು ಕರೆದುಕೊಂಡು ಹೋಗುವಂತೆ ನನ್ನ ತಂದೆಗೆ ತಿಳಿಸಿದರು ಹಾಗಾಗಿ ನನ್ನ ತಂದೆ ನನ್ನನ್ನು ಅವರೋಂದಿಗೆ ನನ್ನ ತಂದೆ ಮನೆಗೆ ಕರೆದುಕೊಂಡು ಬಂದರು.

ನಂತರ ನನ್ನ ತಂದೆ ಮನೆಯಲ್ಲಿ ಸುಮಾರು 20 ದಿನಗಳ ಕಾಲ ಇದ್ದೆನು. ಆ ಸಮಯದಲ್ಲಿ ಈ ವಿಚಾರವನ್ನು ನನ್ನ ತಂದೆ ಚಾಸಾ-14 ಮತುತ 15 ರವರಿಗೆ ತಿಳಿಸಲಾಗಿ ಚಾಸಾ-14 ಮತ್ತು 15 ರವರು ನನ್ನ ತಂದೆಯೊಂದಿಗೆ ಬೆಂಗಳೂರಿಗೆ ಹೋಗಿ ಆರೋಪಿಗಳೊಂದಿಗೆ ರಾಜಿ ಸಂದಾನ ಮಾಡಿ ಬಂದರು. ನಂತರ ನನ್ನನ್ನು ನನ್ನ ತಂದೆ ಜನವರಿ 2017 ರಂದು ಆರೋಪಿಗಳ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿರುತ್ತಾರೆ. ಆ ನಂತರ ಕೆಲವು ದಿನಗಳವರೆಗೆ ನಾನು ಮತ್ತು ಆರೋಪಿಗಳು ಅನ್ಯೋನ್ಯವಾಗಿದ್ದೆವು. ಫೆಬ್ರವರಿ 2017 ರಂದು ನನ್ನ ಗಂಡ 1 ನೇ ಆರೋಪಿ ಕೆಲಸದ ನಿಮಿತ್ತ ದೆಹಲಿಗೆ 15 ದಿನಗಳ ಕಾಲ ಹೋಗಿದ್ದರು. ಆ ಸಮಯದಲ್ಲಿ 150 ಗ್ರಾಂ. ಚಿನ್ನ ಮತ್ತು ಕಾರನ್ನು ನನ್ನ ತಂದೆಯ ಮನೆಯಿಂದ ತರುವಂತೆ 2 ಮತ್ತು 3 ನೇ ಆರೋಪಿಗಳು ನನಗೆ ದೈಹಿಕ ಮತ್ತು ಮಾನಸಿಕವಾಗಿ ಹಿಂಸಿಸುತ್ತಿದ್ದರು. ಹಾಗೂ ನನ್ನನ್ನು ನನ್ನ ತಂದೆಯ ಮನೆಗೆ ಹೋಗದಂತೆ ಮತ್ತು ಮನೆಯಿಂದ ಹೊರ ಹೋಗದಂತೆ ಮನೆಯಲ್ಲಿ ಕೂಡಿಟ್ಟುಕೊಂಡಿದ್ದರು ಮತ್ತು ನನ್ನ ತಂದೆ ತಾಯಿ, ತಮ್ಮ, ಸ್ನೇಹಿತರೊಂದಿಗೆ ಫೋನಿನಲ್ಲಿ ಮಾತನಾಡಬಾರದು ಎಂದು ಹೇಳುತ್ತಿದ್ದರು.

ನನ್ನ ಗಂಡ 1 ನೇ ಆರೋಪಿ ದೆಹಲಿಯಿಂದ ತನ್ನ ಕೆಲಸ ಮುಗಿಸಿ ಮನೆಗೆ ಬಂದಾಗ 2 ಮತ್ತು 3 ನೇ ಆರೋಪಿಗಳು ನನಗೆ ಕೊಟ್ಟ ಹಿಂಸೆಯ ಬಗ್ಗೆ ತಿಳಿಸಿರುತ್ತೇನೆ ಅದಕ್ಕೆ ನನ್ನ ಗಂಡ ನನ್ನ ತಂದೆ ತಾಯಿ ಮಾಡುತ್ತಿರುವುದು ಸರಿಇದೆ ಮೊದಲು ನೀನು ನಿನ್ನ ತಂದೆಯ ಮನೆಯಿಂದ 150 ಗ್ರಾಂ. ಚಿನ್ನ ಮತ್ತು ಕಾರನ್ನು ಪಡೆದುಕೊಂಡು ಬಾ ಎಂದು ತಿಳಿಸಿದರು. ಆ ಸಮಯದಲ್ಲಿ ನಾನು ಗರ್ಭಾವತಿಯಾಗಿರುತ್ತೇನೆ. ನಾನು ಗರ್ಭಿಣಿಯಾದ ನಂತರ ಆರೋಪಿಗಳು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಿದ್ದರು. ಆ ಸಮಯದಲ್ಲಿ ಆರೋಪಿಗಳು

ನೀಡುತ್ತಿದ್ದ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ತಡೆಯಲಾರದೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆನು. ಆ ಸಮಯದಲ್ಲಿ ಆರೋಪಿತರು ನನ್ನನ್ನು ಕುರಿತು ನೀನು ಗರ್ಭಾವತಿಯಾಗಿದ್ದೀಯಾ ಈಗ ನಿನಗೆ ವಿಚ್ಚೇದನೆ ನೀಡಿದರೆ ನಿನನ್ನು ಯಾರು ಮದುವೆಯಾಗುವುದಿಲ್ಲ ಹಾಗಾಗಿ ನಮ್ಮೊದಿಗೆ ಜೀವಿಸಬೇಕಾದರೆ 150 ಗ್ರಾಂ. ಚಿನ್ನ ಮತ್ತು ಕಾರನ್ನು ನಿನನ್ನ ತಂದೆಯಿಂದ ಪಡೆದುಕೊಂಡು ಬಾ ಇಲ್ಲವಾದರೆ ನಿನ್ನ ಮಗನಿಗೆ ಇನ್ನೊಂದು ಮದುವೆ ಮಾಡುತ್ತೇವೆ ನನ್ನ ಮಗನಿಗೆ ಬೇಕಾದಷ್ಟು ಹೆಣ್ಣುಮಕ್ಕಳು ಮದುವೆಯಾಗಲು ಸಿಗುತ್ತವೆ ಎಂದು ಹೇಳಿ ಜೊತೆಗೆ ನಾನು ಯಾರೊಂದಿಗೂ ಮಾತನಾಡಬಾರದು ಎಂದು ನನ್ನ ಮೊಬೈಲ್ ಸಿಮ್ ಕಾರ್ಡ್ ನ್ನು ಬ್ಲಾಕ್ ಮಾಡಿರುತ್ತಾರೆ. ನನ್ನನ್ನು ಆರೋಪಿಗಳು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಒಡ್ಡಿದ್ದರು ಮತ್ತು ಪೊನ್ ಮೂಖಾಂತರ ನನ್ನ ತಂದೆಗೂ ಜೀವ ಬೆದರಿಕೆ ನೀಡಿರುತ್ತಾರೆ. ನನ್ನ ಮೊಬೈಲ್ ಸಿಮ್ ನ್ನು ಬ್ಲಾಕ್ ಮಾಡಿದ ಕಾರಣ ನನಗೂ ಮತ್ತು ನನ್ನ ತಂದೆಯ ಮನೆಯವರಿಗೂ ಯಾವುದೇ ಮಾತುಕತೆ ಸಾದ್ಯವಾಗುತ್ತಿರಲಿಲ್ಲ ಆಗ ನನ್ನ ತಂದೆ ಆರೋಪಿಗಳ ಪೋನ್ ಗೆ ಕರೆ ಮಾಡಿದರು ಸಹ ಅವರು ಪೋನ್ ತೆಗೆಯದ ಕಾರಣ ನನ್ನನ್ನು ನೋಡಿಕೊಂಡು ಬರಲು ನನ್ನ ತಮ್ಮ ಚಾಸಾ-9 ರವರನ್ನು ನನ್ನ ಗಂಡನ ಮನಗೆ ಕಳುಹಿಸಿದ್ದರು. ದಿಃ26-04-2017 ರಂದು ನನ್ನ ತಮ್ಮ ನನ್ನನ್ನು ನನ್ನ ತಂದೆಯ ಮನೆಗೆ ಕರೆದುಕೊಂಡು ಬಂದರು.ನಾನು ನನ್ನ ತಮ್ಮನೊಂದಿಗೆ ನನ್ನ ತಂದೆಯ ಮನೆಗೆ ಬರುವಾಗ 1 ಕೆಜಿ ತೂಕದ ಬೆಳ್ಳಿಯ ಪೂಜಾ ಸಾಮಗ್ರಿಗಳು, ಒಂದು ಜೊತೆ ಬೆಳ್ಳಿ ಕಾಲು ಚೈನ್, ಒಂದು ಜೊತೆ ಚಿನ್ನದ ಓಲೆ ಮತ್ತು ನನ್ನ ಬಟ್ಟೆ ಬರೆಗಳನ್ನು ನನ್ನ ಗಂಡನ ಮನೆಯಲ್ಲಿಯೇ ಬಿಟ್ಟು ಬಂದಿರುತ್ತೇನೆ.

ನಂತರ ಆರೋಪಿತರನ್ನು ರಾಜಿ ಸಂದಾನಕ್ಕೆ ಕೋರಿಕೊಂಡರು ಅವರು ಬರದೆ ಮತ್ತೆ ಅದೇ ರೀತಿ 150 ಗ್ರಾಂ. ಚಿನ್ನ ಮತ್ತು ಕಾರನ್ನು ಕೊಟ್ಟರೆ ನನ್ನನ್ನು ಕರೆದುಕೊಂಡು ಹೋಗುವುದಾಗಿ ತಿಳಿಸಿದರು. ನಾವು ಎಷ್ಟು ಕೇಳಿಕೊಂಡು ಆರೋಪಿಗಳು ನನ್ನನ್ನು ಕರೆದುಕೊಂಡು ಹೋಗಲು ಒಪ್ಪದ ಕಾರಣ ದಿಃ03-05-2017 ರಂದು ಆರೋಪಿಗಳ ವಿರುದ್ದ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1-ಎ ಎಂದು

ಗುರುತಿಸಲಾಯಿತು. ಅದೇ ದಿನ ಪೊಲೀಸರು ಸಂಜೆ 4.30 ಸಮಯಕ್ಕೆ ನಮ್ಮ ಮನೆಯ ಬಳಿ ಬಂದಿದ್ದರು. ಆ ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ನಾನು ಮತ್ತು ಚಾಸಾ-2 ಮತ್ತು 3 ರವರು ಹಾಜರಿದ್ದೆವು. ಆರೋಪಿಗಳು ಇಲ್ಲಿಯೇ ಒಡವೆ ಮತ್ತು ಕಾರನ್ನು ಕೊಡುವಂತೆ ಬೇಡಿಕೆ ಇಟ್ಟಿದ್ದರು ಎಂದು ಸ್ಥಳ ತೋರಿಸಿರುತ್ತೇನೆ. ಆ ಸಮಯದಲ್ಲಿ ಪೊಲೀಸರಿಗೆ ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಮದುವೆಯ 4 ಫೋಟೋಗಳನ್ನು ನೀಡಿದ್ದು ಪೊಲೀಸರು ಮಹಾಜರ್ ಕ್ರಮ ಜರುಗಿಸಿ ಸದರಿ ದಾಖಲೆಗಳನ್ನು ನನ್ನಿಂದ ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಮದುವೆಯ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಆಮಂತ್ರಣ ಪತ್ರಿಕೆಯನ್ನು ನಿಪಿ-2, 4 ಪೊಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಮಹಾಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-7 ಮತ್ತು 8 ಎಂದು, ಮಹಾಜರ್ ಮತ್ತು ನಕ್ಷೆಯನ್ನು ನಿಪಿ-9 ಎಂದು, ಸಾಕ್ಷಿ ನಿಪಿ-9 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9-ಎ ಎಂದು ಗುರುತಿಸಲಾಯಿತು. ನನಗೆ ಮೂರು ವರ್ಷ ವಯಸ್ಸಿನ ಹೆಣ್ಣುಮಗಳಿರುತ್ತಾರೆ. ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿ ನನ್ನ ತಂದೆಯ ಮೇಲೆ ಅವಲಂಬಿತಳಾಗಿ ಬದುಕುತ್ತಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ. ಇ.ಎ.ಒ.

(ದೀಪು ಎಂ.ಟಿ.)
III ನೇ.ಹೆ.ದಿ.ನ್ಯಾ.&ಪ್ರಃದಃನ್ಯಾಃದಂ.,ರವರು,

ಕಡೂರು.